# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಹಾವೇರಿ.

## ಪ್ರಕರಣ ಸಂಖ್ಯೆ: ಸ್ಪೆಷಲ್ ಎನ್.ಡಿ.ಪಿ.ಎಸ್.06/2023

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಸಂತೋಷ ಪಾಟೀಲ | ಅಸಾ : **02** |
| ತಂದೆಯ ಹೆಸರು | : | ಮಲಗೌಡ | ಚಾಸಾ : 01 |
| ವಯಸ್ಸು | : | 41 ವರ್ಷ | |
| ಉದ್ಯೋಗ | : | ಸಿಪಿಐ, ಶಿಖಾರಿಪುರ ಪೊಲೀಸ ವೃತ್ತ ಕಛೇರಿ | |
| ವಾಸ ಸ್ಥಳ | : | ಶಿಖಾರಿಪುರ. | |

ದಿನಾಂಕ: **19/11/2025** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದ: –**

1. ದಿನಾಂಕ:19/04/2022 ರಿಂದ ದಿನಾಂಕ:01/01/2024 ರವರೆಗೆ ನಾನು ಹಾವೇರಿಯ ಸಿ.ಇ.ಎನ್. ಕ್ರೈಂ ಪೊಲೀಸ ಠಾಣೆಯ ಪಿ.ಐ. ಎಂದು ಕೆಲಸ ಮಾಡಿದ್ದೇನೆ.

2. ದಿನಾಂಕ:09/08/2023 ರಂದು ಬೆಳಿಗ್ಗೆ 9.30 ಕ್ಕೆ ತೋಟದ ಯಲ್ಲಾಪುರ ಗ್ರಾಮದ ಬೈಪಾಸ ರಸ್ತೆಯಲ್ಲಿ 3 ಜನ ಗಾಂಜಾ ಮಾರಾಟ ಮಾಡುತ್ತಿದ್ದಾರೆ ಎಂದು ಬಾತ್ಮಿ ಬಂತು. ಬಾತ್ಮಿಯನ್ನು ಮೇಲಾಧಿಕಾರಿಗಳಿಗೆ ತಿಳಿಸಿದೆ. ದಾಳಿ ಕುರಿತು ಡಿವೈ.ಎಸ್.ಪಿ., ಹಾವೇರಿಯವರಿಂದ ಶೋಧನಾ ವಾರೆಂಟ್ ಪಡೆದೆ. ಸದರಿ ವಾರೆಂಟನ್ನು ಈಗ ನಿಪಿ-12 ಎಂದು ಗುರುತಿಸಲಾಯಿತು. ನಾನು ಸಲ್ಲಿಸಿದ ಮನವಿಯನ್ನು ಈಗ ನಿಪಿ-13, ನನ್ನ ಸಹಿಯನ್ನು ನಿಪಿ-13(ಎ) ಎಂದು ಗುರುತಿಸಲಾಯಿತು. ನಗರಸಭೆಗೆ ಮನವಿ ಸಲ್ಲಿಸಿ ಇಬ್ಬರು ಪಂಚರನ್ನು ಕಳಿಸುವಂತೆ ಕೇಳಿಕೊಂಡೆ. ನನ್ನ ಮನವಿಯನ್ನು ಈಗ ನಿಪಿ-14, ನನ್ನ ಸಹಿಯನ್ನು ನಿಪಿ-14(ಎ) ಎಂದು ಗುರುತಿಸಲಾಯಿತು.

3. ಚಾಸಾ-2 ಮತ್ತು 3 ರನ್ನು ಪಂಚರನ್ನಾಗಿ ಕಳಿಸಿಕೊಟ್ಟರು. ಬಾತ್ಮಿ ವಿಷಯವನ್ನು ಸಿಬ್ಬಂದಿ ಮತ್ತು ಪಂಚರಿಗೆ ತಿಳಿಸಿದೆ. ಸಿಬ್ಬಂದಿ ಹಾಗೂ ಪಂಚರೊಂದಿಗೆ ಹುಬ್ಬಳ್ಳಿ ಕಡೆಗೆ ಹೋಗುವ ತೋಟದ ಯಲ್ಲಾಪುರ ಗ್ರಾಮದ ಬೈಪಾಸ ಸರ್ವಿಸ್ ರಸ್ತೆಗೆ ಹೋದೆವು. ದೂರದಿಂದ ನೋಡಿದಾಗ 3 ಜನರು ಸಂಶಯಾಸ್ಪದ ಹಾಜರಿದ್ದುದನ್ನು ಕಂಡು, ಅವರನ್ನು ಹಿಡಿದು ವಿಚಾರಿಸಿ ಹೆಸರು, ವಿಳಾಸ ತಿಳಿದುಕೊಂಡೆ. ಅವರು 1 ಮತ್ತು 2 ನೇ ಆರೋಪಿತರು ಹಾಗೂ ಒಬ್ಬ ಬಾಲಕ ಎಂದು ಗೊತ್ತಾಯಿತು.

4. ಅವರ ಸ್ವಾಧೀನದಲ್ಲಿ ಗಾಂಜಾ ಇದೆ ಎಂದು ಖಚಿತಪಡಿಸಿಕೊಂಡೆ. ಅವರ ಅಂಗಜಪ್ತಿ ಕುರಿತು ಮಾಹಿತಿ ಮತ್ತು ಅವರ ಅಭಿಪ್ರಾಯ ಕುರಿತು ನೋಟೀಸು ನೀಡಿದೆ. ಸದರಿ ತಿಳುವಳಿಕೆ ಪತ್ರಗಳನ್ನು ಈಗ ನಿಪಿ-15, 16, 1 ಮತ್ತು 2 ನೇ ಆರೋಪಿತರು ನೀಡಿದ ಸಮ್ಮತಿ ಪತ್ರಗಳನ್ನು ನಿಪಿ-

17 ಮತ್ತು 18 ಹಾಗೂ ನನ್ನ ಸಹಿಗಳನ್ನು ನಿಪಿ-15(ಎ), ನಿಪಿ-16(ಎ), ನಿಪಿ-17(ಎ) ಮತ್ತು ನಿಪಿ-18(ಎ) ಎಂದು ಗುರುತಿಸಲಾಯಿತು.

5. ಪತ್ರಾಂಕಿತ ಅಧಿಕಾರಿಗಳಾದ ಚಾಸಾ-8 ಎಂ.ಎಸ್.ಪಾಟೀಲ್, ಡಿವೈ.ಎಸ್.ಪಿ. ಯವರನ್ನು ಕರೆಸಿಕೊಂಡು ಘಟನೆ ಕುರಿತು ವಿವರಿಸಿದೆ. 1 ನೇ ಆರೋಪಿ ಅಜಯ್ ಸ್ವಾಧೀನದಲ್ಲಿದ್ದ ನೀಲಿ ಬಣ್ಣದ ಕಾಲೇಜ ಬ್ಯಾಗನ್ನು ತೆರೆದು ನೋಡಿದಾಗ ಅದರಲ್ಲಿ ಹೂವು, ಮೊಗ್ಗು, ಎಲೆ ಮಿಶ್ರಿತ ಗಾಂಜಾ ವಾಸನೆಯುಳ್ಳ ವಸ್ತು ಇತ್ತು. ನಮ್ಮೊಂದಿಗೆ ತೆಗೆದುಕೊಂಡು ಹೋಗಿದ್ದ ತೂಕದ ಯಂತ್ರದಿಂದ ತೂಗಿ ನೋಡಿದೆ. ಅದರ ತೂಕ 1520 ಗ್ರಾಂ ಇತ್ತು. ಅದರ ಅಂದಾಜು ಮೌಲ್ಯ ರೂ.15,000/- ಆಗುತ್ತಿತ್ತು. ಸದರಿ ಸ್ವತ್ತನ್ನು ಜಪ್ತಿಮಾಡಿ ಸೀಲು ಮಾಡಿದೆ.

6. 2 ನೇ ಆರೋಪಿ ಯಾಸಿನ್ ಸ್ವಾಧೀನದಲ್ಲಿದ್ದ ಕೆಂಪು ಮತ್ತು ಕಪ್ಪು ಬಣ್ಣದ ಬ್ಯಾಗನ್ನು ತೆರೆದು ನೋಡಿದಾಗ ಅದರಲ್ಲಿ ಹೂವು, ಮೊಗ್ಗು, ಎಲೆ ಮಿಶ್ರಿತ ಗಾಂಜಾ ವಾಸನೆಯುಳ್ಳ ವಸ್ತು ಇತ್ತು. ನಮ್ಮೊಂದಿಗೆ ತೆಗೆದುಕೊಂಡು ಹೋಗಿದ್ದ ತೂಕದ ಯಂತ್ರದಿಂದ ತೂಗಿ ನೋಡಿದೆ. ಅದರ ತೂಕ 1500 ಗ್ರಾಂ ಇತ್ತು. ಅದರ ಅಂದಾಜು ಮೌಲ್ಯ ರೂ.10,000/- ಆಗುತ್ತಿತ್ತು. ಸದರಿ ಸ್ವತ್ತನ್ನು ಜಪ್ತಿಮಾಡಿ ಸೀಲು ಮಾಡಿದೆ.

7. ಬಾಲಕ ಶಫಿವುಲ್ಲಾ ಸ್ವಾಧೀನದಲ್ಲಿದ್ದ ಹಳದಿ ಬಣ್ಣದ ಬ್ಯಾಗನ್ನು ತೆರೆದು ನೋಡಿದಾಗ ಅದರಲ್ಲಿ ಹೂವು, ಮೊಗ್ಗು, ಎಲೆ ಮಿಶ್ರಿತ ಗಾಂಜಾ ವಾಸನೆಯುಳ್ಳ ವಸ್ತು ಇತ್ತು. ನಮ್ಮೊಂದಿಗೆ ತೆಗೆದುಕೊಂಡು ಹೋಗಿದ್ದ ತೂಕದ ಯಂತ್ರದಿಂದ ತೂಗಿ ನೋಡಿದೆ. ಅದರ ತೂಕ 1100 ಗ್ರಾಂ ಇತ್ತು. ಅದರ ಅಂದಾಜು ಮೌಲ್ಯ ರೂ.10,000/- ಆಗುತ್ತಿತ್ತು. ಸದರಿ ಸ್ವತ್ತನ್ನು ಜಪ್ತಿಮಾಡಿ ಸೀಲು ಮಾಡಿದೆ.

8. ಸದರಿ ಸ್ವತ್ತುಗಳನ್ನು ಎ-1 ರಿಂದ 3 ಎಂದು ಗುರುತಿಸಿದೆ. 1 ನೇ ಆರೋಪಿ ಸ್ವಾಧೀನದಲ್ಲಿ ರೂ.1,500/- ಹಾಗೂ ಒಂದು ಓಪ್ಪೋ ಎಫ್-20 ಮೊಬೈಲ್ ಹ್ಯಾಂಡಸೆಟ್ ಇದ್ದವು. 2 ನೇ ಆರೋಪಿ ಸ್ವಾಧೀನದಲ್ಲಿ ರೂ.1,000/- ಹಾಗೂ ಒಂದು ಓಪ್ಪೋ 21-ಪ್ರೋ ಮೊಬೈಲ್ ಹ್ಯಾಂಡಸೆಟ್ ಇದ್ದವು. ಸದರಿ ಸ್ವತ್ತನ್ನು ಜಪ್ತಿಮಾಡಿ ಸೀಲು ಮಾಡಿದೆ.

9. ಈ ಮೇಲೆ ಹೇಳಿದವರ ಸ್ವಾಧೀನದಲ್ಲಿದ್ದ ಕೆಎ-27 ಇಟಿ 1988 ಮತ್ತು ಕೆಎ 27 ಎಚ್ ಎಲ್ 5404 ಸಂಖ್ಯೆಯ ಬೈಕುಗಳನ್ನು ಜಪ್ತಿಮಾಡಿದೆ. ಜಪ್ತಿಮಾಡಿದ ಎಲ್ಲಾ ವಸ್ತುಗಳಿಗೂ ವಿವರಣೆ ಬರೆದು ನನ್ನ ಮತ್ತು ಪಂಚರ ಸಹಿ ಇರುವ ಚೀಟಿ ಅಂಟಿಸಿದೆ. ಆರೋಪಿತರ ದಸ್ತಗಿರಿ ಕುರಿತು ಸಂಬಂಧಿಕರಿಗೆ ನೋಟೀಸು ನೀಡಿ, ಸ್ವತ್ತು ಮತ್ತು ಆರೋಪಿತರನ್ನು ಠಾಣೆಗೆ ತಂದು ಚಾಸಾ-15 ಪಿ.ಎಸ್.ಐ.ರವರಿಗೆ ಒಪ್ಪಿಸಿದೆ. ನನ್ನ ವರದಿಯನ್ನು ಈಗ ನಿಪಿ-19, ನನ್ನ ಸಹಿಯನ್ನು ನಿಪಿ-19(ಎ) ಎಂದು ಗುರುತಿಸಲಾಯಿತು. ಈಗ ತೋರಿಸಿದ ಪ್ರ.ವ.ವರದಿ ಮೇಲೆ ನನ್ನ ಸಹಿ ಇದ್ದು, ಪ್ರ.ವ.ವರದಿ

ಯನ್ನು ಈಗ ನಿಪಿ-20, ನನ್ನ ಸಹಿಯನ್ನು ನಿಪಿ-20(ಎ) ಎಂದು ಗುರುತಿಸಲಾಯಿತು. ಜಪ್ತಿ ಮಾಡಲಾದ ಸ್ವತ್ತು ಮತ್ತು ವಾಹನಗಳನ್ನು ಗುರುತಿಸಬಲ್ಲೆ.

10. ಪಂಚನಾಮೆಯಲ್ಲಿ ನಜರಚೂಕಿನಿಂದ ಒಂದು ಬೈಕಿನ ಸಂಖ್ಯೆ ಕೆಎ 27 ಎಚ್ ಎಲ್ 5404 ಎಂದು ನಮೂದಾಗಿದ್ದು, ಅದು ಕೆಎ 17 ಎಚ್ ಎಲ್ 5404 ಎಂದು ಆಗಬೇಕಿತ್ತು. ಆ ಬಗ್ಗೆ ಒಂದು ಮನವಿ ಸಲ್ಲಿಸಲಾಗಿದೆ. ಮನವಿಯನ್ನು ಈಗ ನಿಪಿ-21 ಎಂದು ಗುರುತಿಸಲಾಯಿತು. ಈಗ ತೋರಿಸಿದ ನಿಪಿ-2 ಮತ್ತು 3 ರಲ್ಲಿ ಇರುವ ಬೈಕುಗಳು ನಾನು ಜಪ್ತಿಮಾಡಿದ ಬೈಕುಗಳು ಇರುತ್ತವೆ.

11. ಈಗ ತೋರಿಸಲಾದ ಸೀಲು ಮಾಡಲಾದ ಎರಡು ಬ್ಯಾಗುಗಳು ನಾನು ಜಪ್ತಿ ಮಾಡಿದುವೇ ಇರುತ್ತವೆ. ನೀಲಿ ಬ್ಯಾಗನ್ನು ಮುಮಾ-1 ಮತ್ತು ಕೆಂಪು ಬ್ಯಾಗನ್ನು ಮುಮಾ-2 ಎಂದು ಗುರುತಿಸಲಾಯಿತು. ಈಗ ತೋರಿಸಿದ ನಿಪಿ-1 ನಾನು ತಯಾರಿಸಿದ ಪಂಚನಾಮೆ ಇದ್ದು, ನನ್ನ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು.

*(ಈ ಹಂತದಲ್ಲಿ ಮಾ.ಸಾ.ಅ.ರವರ ವಿನಂತಿ ಮೇರೆಗೆ ಮುಂದೂಡಲಾಯಿತು.)*

**(**ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.**)**

ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಹಾಗೂ ವಿಶೇಷ ನ್ಯಾಯಾಧೀಶರು, ಹಾವೇರಿ.